**ದಿನಾಂಕಃ 28-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಎಂ.ಎ.ಕೆ ವಕೀಲರಿಂದಃ**

ನನಗೆ ವೈಯಕ್ತಿಕವಾಗಿ ಈ ದಾವೆಯ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.367 ಇರುತ್ತದೆ. ಸದರಿ ಆಸ್ತಿ ಮಾಲಗತ್ತಿ ಸೀಮೆಯಲ್ಲಿ ಇರುತ್ತದೆ. ಸದರಿ ಆಸ್ತಿ ಒಟ್ಟು 10 ಎಕರೆ ಇರುತ್ತದೆ. ಸದರಿ ಆಸ್ತಿಗೆ ಮೂಲ ಪಟ್ಟೆದಾರ ಬಸಪ್ಪ ಎನ್ನುವವರು ಇದ್ದರು. ಸದರಿ ಆಸ್ತಿಯ ಚಕ್ಕಬಂದಿ ಪೂರ್ವಕ್ಕೆ-ನಾಯಗೋಡಿಯವರ ಹೊಲ, ಪಶ್ಚಿಮಕ್ಕೆ-ಕಿರದಳ್ಳಿಯವರ ಹೊಲ, ಉತ್ತರಕ್ಕೆ-ಮಳ್ಳಿಯವರ ಹೊಲ ಮತ್ತು ದಕ್ಷಿಣಕ್ಕೆ- ಕಿರದಳ್ಳಿಯವರ ಜಮೀನು ಇರುತ್ತದೆ. ನಮ್ಮ ಮನೆಗೂ ಮತ್ತು ಲಕ್ಷ್ಮೀಬಾಯಿ ಮನೆಗೆ 10-12 ಮನೆಗಳ ಅಂತರ ಇರುತ್ತವೆ. 2 ನೇ ಪ್ರತಿವಾದಿಯ ತಾಯಿಯ ಹೆಸರು ಯಲ್ಲಮ್ಮ ಎಂದರೆ ಸರಿ. 2 ನೇ ಪ್ರತಿವಾದಿಯ ಗಂಡನ ಹೆಸರು ಸಾಬಣ್ಣ ಇರುತ್ತದೆ. ಸರ್ವೆ ನಂ.367 ರಲ್ಲಿ ಜಮೀನಲ್ಲಿ 4 ಹಿಸ್ಸೆಗಳು ಇರುತ್ತವೆ. ಸದರಿ 4 ಹಿಸ್ಸೆಗಳ ಪ್ರತ್ಯೇಕ ಚಕ್ಕಬಂದಿ ಹೇಳಲು ಬರುತ್ತಾ ಅಂತ ಕೇಳಲು ಸಾಕ್ಷಿಯು 4 ಹಿಸ್ಸೆಗಳು ಕೂಡಿಯೇ ಇರುತ್ತವೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 4 ಹಿಸ್ಸೆಗಳು ಎಷ್ಟು ವಿಸ್ತೀರ್ಣ ಇರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಈ ಪ್ರಕಣದಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ವಾದಿಗೆ ಸಾಹಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮಾಹಿತಿ ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

**02.** 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದ ಕಾಣಿ ಪತ್ರವನ್ನು ಬರೆದುಕೊಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂರೆ ಸರಿಯಲ್ಲ.

**ಪಾಟೀ ಸವಾಲು: 4 ರಿಂದ 6 ನೇ ಪ್ರತಿವಾದಿಯ ಪರ ಶ್ರೀ ಎಸ್.ಬಿ.ಎಂ ವಕೀಲರು ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.